**ದಿನಾಂಕ 15.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಪಿ.ಕೆ.ಎಸ್ ಎದುರುದಾರರ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳ ಕುರಿತು ತಿಳಿದುಕೊಂಡಿರುತ್ತೇನೆ. ದಾವ ಅಂಗಡಿಗಳ ಹಿಂಭಾಗದಲಿಲ ಎದುರುದಾರರ ವಾಸದ ಮನೆ ಇರುತ್ತದೆ ಎಂದರೆ ಸರಿ . ಸದರಿ ಅಂಗಡಿಗಳ ಮುಂಭಾಗದ ಸಾರ್ವಜನಿಕ ರಸ್ತೆಯ ಮುಖಾಂತರ ಎದುರುದಾರರು ತಮ್ಮ ಮನೆಗೆ ಹೋಗುತ್ತಾರೆಂದರೆ ಸರಿ. ನಿಪಿ-8ರಲ್ಲಿ 2ನೇ ಎದುರುದಾರರು ಯಾವುದೇ ನಿರ್ಮಾಣ ಮಾಡದೇ ನಡೆದುಕೊಂಡು ಹೋಗುತ್ತಿದ್ದಾರೆಂದರೆ ಸರಿ. ನಿಪಿ-8 ರಿಂದ 17 ರ ಫೋಟೋಗಳನ್ನು ನನ್ನ ಮೊಬೈಲ್ ಮುಖಾಂತರ ತೆಗೆದು ಹನೂರಿನ ಬಸ್ ನಿಲ್ದಾಣದಲ್ಲಿರುವ ಸ್ಟುಡಿಯೋದಲ್ಲಿ ಪ್ರಿಂಟ್ ತೆಗೆಸಿರುತ್ತೇನೆ. ಸದರಿ ಸ್ಟುಡಿಯೋ ಹೆಸರು ಮತ್ತು ಮಾಲೀಕರ ಹೆಸರು ನಾನು ನನ್ನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ, ಸಾಕ್ಷಿಯು ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆಂದು ನುಡಿಯುತ್ತಾರೆ. ನಿಪಿ-8 ರಿಂದ 17 ರ ನೈಜತೆಯ ಕುರಿತು ಸ್ಟುಡಿಯೋ ವ್ಯಕ್ತಿಗಳು ದೃಢೀಕರಣ ಪತ್ರ ನೀಡಿರುವುದಿಲ್ಲ.

ಪೊಲೀಸರು, ಕೆ.ಇ.ಬಿ ಅಧಿಕಾರಿಗಳು ಹಾಗೂ ಪಟ್ಟಣ ಪಂಚಾಯ್ತಿ ಅಧಿಕಾರಿಗಳು ನನ್ನ ದೂರಿನ ಮೇರೆಗೆ ದಾವಾಸ್ತಿಗೆ ಭೇಟಿ ಮಾಡಿರುವ ಕುರಿತು ನನಗೆ ಗೊತ್ತಿಲ್ಲ. ಯಾವುದೇ ಕಟ್ಟಡ ನಿರ್ಮಾಣ ಮುಕ್ತಾಯವಾದ ನಂತರವಷ್ಟೇ ವಿದ್ಯುತ್ ಸಂಪರ್ಕ ನೀಡುತ್ತಾರೆಂದರೆ ಸರಿ. ಓ.ಎಸ್.268/2014ರ ದಾವೆಯಲ್ಲಿ ನ್ಯಾಯಾಲಯ ತಡೆಯಾಜ್ಞೆ ನೀಡುವ ಪೂರ್ವದಲ್ಲೇ ಪ್ರತಿವಾದಿಗಳು ಕಟ್ಟಡ ನಿರ್ಮಾಣ ಪೂರ್ಣಗೊಳಿಸಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯ ತಡೆಯಾಜ್ಞೆ ನೀಡುವ ಪೂರ್ವದಲ್ಲಿ ತೆಗೆದ ಫೋಟೋಗಳನ್ನು ಬಳಸಿಕೊಂಡು ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ತಡೆಯಾಜ್ಞೆ ನೀಡುವ ಪೂರ್ವದಲ್ಲಿ ದಾವಾಸ್ತಿಯ ಸ್ಥಿತಿಯ ಕುರಿತು ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿಯ ಯಾವುದೇ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಟ್ಟಣ ಪಂಚಾಯ್ತಿ ಅಧಿಕಾರಿಗಳು ಕಟ್ಟಡ ನಿರ್ಮಾಣ ಪೂರ್ಣವಾದ ನಂತರ ಮಾತ್ರ 'ಕಟ್ಟಡ ನಿರ್ಮಾಣ ಮುಕ್ತಾಯ ವರದಿ' ನೀಡುತ್ತಾರೆಂದರೆ ಸರಿ. ನ್ಯಾಯಾಲಯ ತಡೆಯಾಜ್ಞೆ ನೀಡುವ ಪೂರ್ವದಲ್ಲೇ

ಕಟ್ಟಣ ನಿರ್ಮಾಣ ಪೂರ್ಣವಾದ ಕಾರಣದಿಂದ ಪ್ರತಿವಾದಿಗಳು ಪಟ್ಟಣ ಪಂಚಾಯ್ತಿಗೆ ಕಟ್ಟಡ ನಿರ್ಮಾಣ ಮುಕ್ತಾಯ ವರದಿ ನೀಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ಪಟ್ಟಣ ಪಂಚಾಯ್ತಿಗೆ ನೀಡಿರುವ ಅರ್ಜಿಯ ವಿಚಾರ ತಿಳಿದುಕೊಂಡು ನಾನು ಕಟ್ಟಡ ನಿರ್ಮಾಣ ಮುಕ್ತಾಯ ವರದಿ ನೀಡದಂತೆ ಅಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡಿ ನಿಪಿ-26 ರಂತೆ ಅರ್ಜಿ ನೀಡಿರುತ್ತೇನೆಂದರೆ ಸರಿಯಲ್ಲ. ಎದುರುದಾರರು ನ್ಯಾಯಾಲಯದ ತಡೆಯಾಜ್ಞೆ ನೀಡಿದ ನಂತರ ಯಾವುದೇ ಕಟ್ಟಡ ನಿರ್ಮಾಣ ಮಾಡದೇ ಇದ್ದರೂ ಅವರ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಠಿ ಮಾಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ